# KARNATAKA LOKAYUKTA

No. UPLOK-2/DE/684/2017/ARE-14

Multi Storied Building,
Dr. B.R. Ambedkar Veedhi,
Bengaluru-560 001.
Dated 30.09.2019.

## RECOMMENDATION

Sub:- Departmental inquiry against (1) Shri Chaluvaraju, Sub-Registrar, K.R.Nagara, (2) Smt.Rajeshwari, Case Worker, KR Nagara TMC, Mysore District and (3)Sri.Chikkananjaiah, the then Chief Officer, K.R.Nagara TMC, Mysore District – reg.

Ref:- 1) Government Order No. RD 75 SRS (2) 2016 dated 23.01.2017 and (2) No.UDD 190 DMK 2016 dated 20.04.2017.

2) Nomination order No. UPLOK-2/DE/684/2017 dated 23.05.2017 of Upalokayukta, State of Karnataka.

3) Inquiry report dated 25.09.2019 of Additional Registrar of Enquiries-14, Karnataka Lokayukta, Bengaluru.

~~~~~

The Government by its orders dated 23.01.2017 and 20.04.2017, initiated the disciplinary proceedings against (1) Shri Chaluvaraju, Sub-Registrar, K.R.Nagara, (2) Smt.Rajeshwari, Case Worker, KR Nagara TMC, Mysore District and (3)Sri.Chikkananjaiah, the then Chief Officer, K.R.Nagara TMC, Mysore District [hereinafter referred
~~~~~

to as Delinquent Government Officials, for short as 'DGOs 1 to 3' respectively] and entrusted the departmental inquiry to this Institution.

2. This Institution by Nomination Order No. UPLOK-2/DE/684/2017 dated 23.05.2017 nominated Additional Registrar of Enquiries-1, Karnataka Lokayukta, Bengaluru, as the Inquiry Officer to frame charges and to conduct departmental inquiry against DGOs for the alleged charge of misconduct, said to have been committed by them. Subsequently, by Nomination Order No. UPLOK-2/DE/2017 dated 04.07.2017 Additional Registrar of Enquiries-7, Karnataka Lokayukta, Bengaluru, was re-nominated and finally, by Nomination Order No. UPLOK-1&2/DE/Transfers/2018 dated 06.08.2018 Additional Registrar of Enquiries-14, Karnataka Lokayukta, Bengaluru, was re-nominated as the Inquiry Officer to continue the said departmental inquiry against DGOs for the alleged charge of misconduct, said to have been committed by them.

3. The DGO 1 Shri Chaluvaraju, Sub-Registrar, K.R.Nagara, DGO-2 Smt.Rajeshwari, Case Worker, KR Nagara TMC, Mysore District and DGO-3 Sri.Chikkananjaiah, the then Chief Officer, K.R.Nagara TMC, Mysore District, were tried for the following charges:-

"ನೀವು 1ನೇ ಆರೋಪಿತ ನೌಕರರಾದ ಶ್ರೀ.ಚಲುವರಾಜು, ಕೆ.ಆರ್.ನಗರ ಉಪ ನೊಂದಣಾದಿಕಾರಿಯಾಗಿ ಕೆಲಸ ಮಾಡುತ್ತಿದ್ದಾಗ ದಿ: 22.1.2015ರಂದು ಶ್ರೀ.ಎ.ವಿ.ಗಂಗಾಧರ್ ಬಿನ್ ಎಂ.ಟಿ.ಆಚಾರ್ ಎಂಬುವವರು ಶ್ರೀಮತಿ.ಮೀನಾ ಕೋಂ ರಮೇಶ್ ಎಂಬುವವರಿಗೆ ನಿವೇಶನ ಮಾರಾಟ ಮಾಡಲು ಕ್ರಯ ಪತ್ರ ನೊಂದಣಿ ಮಾಡಲು ನಿಮ್ಮ ಮುಂದೆ ಹಾಜರುಪಡಿಸಿದಾಗ ಸದರಿ ಆಸ್ತಿಗೆ ಸಂಬಂಧಿಸಿದ ಮಾರಾಟಗಾರರ ಹಕ್ಕು ಪರಿಶೀಲಿಸಲು ಮೂಲ ಪತ್ರ. (ಮದರ್ ಡೀಡ್). ಖಾತಾ ಪತ್ರ. ಸ್ಕೆಚ್ ಹಾಗೂ ಇತರೆ ಅವಶ್ಯಕ ದಾಖಲೆಗಳನ್ನು ಪರಿಶೀಲಿಸದೆ ನೋಂದಣಿ ಮಾಡಿರುತ್ತೀರಿ ಹಾಗೂ 2ನೇ ಆರೋಪಿತ ನೌಕರರಾದ ನೀವು ಶ್ರೀಮತಿ ರಾಜೇಶ್ವರಿ ರವರು ಆಸ್ತಿ ಸಂ: 9550/39ರಲ್ಲಿ ಇದ್ದ 20*30 ಅಡಿ ಅಳತೆಯ ನಿವೇಶನದ ಖಾತೆ ಬದಲಾವಣೆಗೆ ಶ್ರೀಮತಿ.ಮಿನಾ ಕೋಂ ರಮೇಶ್ ಎಂಬುವವರು ಅರ್ಜಿ ಸಲ್ಲಿಸಿದಾಗ ಆಸ್ತಿಗೆ ಸಂಬಂಧಿಸಿದ ಕಡತವನ್ನು ಪರಿಶೀಲಿಸದೆ ಸದರಿ ಶ್ರೀಮತಿ.ಮೀನಾ ರವರ ಹೆಸರಿಗೆ ಖಾತೆ ವರ್ಗಾವಣೆ ಮಾಡಬಹುದೆಂದು ಶಿಫಾರಸ್ಸು ವರದಿಯನ್ನು ಮುಖ್ಯಾಧಿಕಾರಿಗಳಿಗೆ ಸಲ್ಲಿಸಿದ್ದು ನಂತರ ನೀವು 3ನೇ ಆರೋಪಿತ ನೌಕರರಾದ ಶ್ರೀ.ಚಿಕ್ಕನಂಜಯ್ಯ ಆದ ನೀವು ಕೃಷ್ಣರಾಜನಗರ ನಗರಸಭೆ ಮುಖ್ಯಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದಾಗ 2ನೇ ಆರೋಪಿತ ನೌಕರರಾದ ಶ್ರೀಮತಿ. ರಾಜೇಶ್ವರಿ ರವರು ಮಂಡಿಸಿದ ಟಿಪ್ಪಣಿಯನ್ನು ಕಛೇರಿಯಲ್ಲಿ ಸದರಿ ಆಸ್ತಿಗೆ ಸಂಬಂಧಿಸಿದಂತೆ ಇಟ್ಟಿದ್ದ ದಾಖಲೆಗಳನ್ನು ಪರಿಶೀಲಿಸದೆ ಶ್ರೀಮತಿ. ಮೀನಾ ಎಂಬುವವರ ಹೆಸರಿಗೆ ಖಾತೆ ವರ್ಗಾವಣೆಗೆ ಆದೇಶ ಮಾಡಿರುತ್ತೀರಿ. ಆದಕಾರಣ 1 ರಿಂದ 3ನೇ ಆಪಾದಿತ ಸರ್ಕಾರಿ ನೌಕರರಾದ ನೀವು ಸರ್ಕಾರಿ ಸೇವಕರಾಗಿದ್ದು, ನಿಮ್ಮ ಕರ್ತವ್ಯಪಾಲನೆಯಲ್ಲಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಸ್ವಂತ ಲಾಭಕ್ಕಾಗಿ ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ಆಪಾದಿತ ಸರ್ಕಾರಿ ನೌಕರರಾದ ನೀವು ಕರ್ನಾಟಕ ಸರ್ಕಾರಿ ಸೇವಾ (ನಡತೆ) ನಿಯಮಾವಳಿ 1966ರ ನಿಯಮ (3)(1)ನೇ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಎಸಗಿದ್ದೀರಿ. "

4. The Inquiry Officer (Additional Registrar of Enquiries-14) on proper appreciation of oral and documentary evidence has held that the Disciplinary Authority has 'failed to prove' the charge framed against the DGO 1 Shri Chaluvaraju, Sub-Registrar, K.R.Nagara.

5. Further, the Inquiry Officer (Additional Registrar of Enquiries-14) on proper appreciation of oral and documentary evidence has held that the Disciplinary Authority has ' proved' the charge framed against the DGO-2 Smt.Rajeshwari, Case Worker, KR Nagara TMC, Mysore District and DGO-3 Sri.Chikkananjaiah, the then Chief Officer, K.R.Nagara TMC, Mysore District.

6. On re-consideration of report of inquiry, I do not find any reason to interfere with the findings recorded by the Inquiry Officer. Therefore, it is hereby recommended to the Government to accept the report of Inquiry Officer and to exonerate DGO.1 Shri Chaluvaraju, Sub-Registrar, K.R.Nagara, Mysore District, of the charges framed against him.

7. As per the First Oral Statement of DGO 2 and the information furnished by the Inquiry Officer,

i) DGO 2 – Smt.Rajeshwari, has retired from service on 30.9.2015;

ii) DGO-3 Sri.Chikkananjaiah, has retired from service on 31.5.2017.

8. Having regard to the nature of charge *'proved'* against DGO 2 - Smt.Rajeshwari, Case Worker, KR Nagara TMC, Mysore District and DGO-3 Sri.Chikkananjaiah, the then Chief Officer, K.R.Nagara TMC, Mysore District,

i) it is hereby recommended to the Government to impose penalty of ' withholding 10% of pension payable to DGO.2 Smt.Rajeshwari, for a period of five years;

ii) it is hereby recommended to the Government to impose penalty of ' withholding 10% of pension payable to DGO-3 Sri.Chikkananjaiah, for a period of five years.

9. Action taken in the matter shall be intimated to this Authority.

Connected records are enclosed herewith.

N. Ananda

(JUSTICE N. ANANDA)
Upalokayukta,
State of Karnataka.
30/9

# KARNATAKA LOKAYUKTA

No.UPLOK-2/DE/684/2017/ARE-14

M.S. Building
Dr.B.R. Ambedkar Road
Bangalore-560 001
Date: 25/9/2019

## ENQUIRY REPORT

**Present :** Smt. K.Bhagya, Additional Registrar of Enquiries-14
Karnataka Lokayukta
Bangalore.

**Sub:** Departmental Enquiry against (1)Sri. Chaluvaraju, Sub-Registrar, K.R.Nagar (2) Smt. Rajeshwari, Case Worker, Town Municipal Council, K.R.Nagar Taluk, Mysuru District and (3) Sri. Chikkananjaiah, the then Chief Officer, Town Municipal Council, K.R.Nagar, Taluk, Mysore District(Prtly, Project Director, District Urban Development Cell, Office of the Deputy Commissioner, Mysore) -reg.

**Ref**:
1. Report u/s 12(3) of the K.L Act, 1984 in Compt/Uplok/MYS/3081/2015/DRE-4, Dtd.,29/11/2016.
2. Government Order No.ಕಂಇ 75 ಮುನೋಸೇ(2) 2016 ಬೆಂಗಳೂರು. ದಿ:23/1/2017.
3. Government Order No. ನಅಇ 190 ಡಿಎಂಕೆ 2016, ಬೆಂಗಳೂರು, ದಿ:20/4/2017.
4. Nomination Order No:UPLOK-2/DE/684/2017, dated: 23.5.2017 of Hon'ble Upalokayukta-2, Bangalore.
5. Order No.Uplok-1/DE/2017, Bangalore, dtd:6-7-2017 of Hon'ble Upalokayukta.
6. Note No.Uplok-1&2/DE/Transfers/2018 Dt: 6.8.2018.

* * * *

The complainant by name Smt. Mahadevi W/o. late Rama, Kantenahalli, Ashraya Layout, K.R.Nagar Town, Mysuru District has filed

the complaint against this DGOs alleging misconduct and dereliction of duty.

2. After completion of the investigation, a report was sent to the Government u/s 12(3) of the Karnataka Lokayukta Act as per reference No.1. In pursuance of the report, the Government of Karnataka was pleased to issue the G.O. Dtd., 23.1.2017 and 20.4.2017 authorizing the Hon'ble Upalokayukta to hold enquiry as per reference No.2 and 3. In pursuance of the G.O., the nomination was issued by the Hon'ble Upalokayukta-2 on 23.5.2017 authorizing ARE-1 to hold enquiry and to report as per reference No. 4 and this file is transferred from ARE-1 to ARE-7 and ARE-7 to ARE-14 as per reference No.5. and 6.

3. On the basis of the nomination, the Articles of Charge against the DGO, framed by the then Additional Registrar of Enquiries-1 which includes Articles of Charge at Annexure-I and Statement of Imputation of Misconduct at Annexure No.II are the following and the same was sent to the DGO, on 25.5.2017.

**ANNEXURE-I**
**CHARGE:**

4. ನೀವು 1ನೇ ಆರೋಪಿತ ನೌಕರರಾದ ಶ್ರೀ.ಚಲುವರಾಜು. ಕೆ.ಆರ್.ನಗರ ಉಪ ನೊಂದಣಾದಿಕಾರಿಯಾಗಿ ಕೆಲಸ ಮಾಡುತ್ತಿದ್ದಾಗ ದಿ: 22.1.2015ರಂದು ಶ್ರೀ.ಎ.ಪಿ.ಗಂಗಾಧರ್ ಬಿನ್ ಎಂ.ಟಿ.ಆಚಾರ್ ಎಂಬುವವರು ಶ್ರೀಮತಿ.ಮಿನಾ ಕೋಂ ರಮೇಶ್ ಎಂಬುವವರಿಗೆ ನಿವೇಶನ ಮಾರಾಟ ಮಾಡಲು ಕ್ರಯ ಪತ್ರ ನೊಂದಣಿ ಮಾಡಲು ನಿಮ್ಮ ಮುಂದೆ ಹಾಜರುಪಡಿಸಿದಾಗ ಸದರಿ ಆಸ್ತಿಗೆ ಸಂಬಂಧಿಸಿದ ಮಾರಾಟಗಾರರ ಹಕ್ಕು ಪರಿಶೀಲಿಸಲು ಮೂಲ ಪತ್ರ, (ಮದರ್ ಡೀಡ್), ಖಾತಾ ಪತ್ರ, ಸ್ಕೆಚ್ ಹಾಗೂ ಇತರೆ ಅವಶ್ಯಕ ದಾಖಲೆಗಳನ್ನು ಪರಿಶೀಲಿಸದೆ ನೋಂದಣೆ ಮಾಡಿರುತ್ತೀರಿ ಹಾಗೂ 2ನೇ ಆರೋಪಿತ ನೌಕರರಾದ ನೀವು ಶ್ರೀಮತಿ ರಾಜೇಶ್ವರಿ ರವರು ಆಸ್ತಿ ಸಂ: 9550/39ರಲ್ಲಿ ಇದ್ದ 20*30 ಅಡಿ ಅಳತೆಯ ನಿವೇಶನದ ಖಾತೆ ಬದಲಾವಣೆಗೆ ಶ್ರೀಮತಿ.ಮಿನಾ ಕೋಂ ರಮೇಶ್ ಎಂಬುವವರು ಅರ್ಜಿ ಸಲ್ಲಿಸಿದಾಗ ಆಸ್ತಿಗೆ ಸಂಬಂಧಿಸಿದ ಕಡತವನ್ನು ಪರಿಶೀಲಿಸದೆ ಸದರಿ ಶ್ರೀಮತಿ.ಮೀನಾ ರವರ ಹೆಸರಿಗೆ ಖಾತೆ ವರ್ಗಾವಣೆ ಮಾಡಬಹುದೆಂದು

ಶಿಫಾರಸ್ಸು ವರದಿಯನ್ನು ಮುಖ್ಯಾಧಿಕಾರಿಗಳಿಗೆ ಸಲ್ಲಿಸಿದ್ದು ನಂತರ ನೀವು 3ನೇ ಆರೋಪಿತ ನೌಕರರಾದ ಶ್ರೀ.ಚಿಕ್ಕನಂಜಯ್ಯ ಆದ ನೀವು ಕೃಷ್ಣರಾಜನಗರ ನಗರಸಭೆ ಮುಖ್ಯಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದಾಗ 2ನೇ ಆರೋಪಿತ ನೌಕರರಾದ ಶ್ರೀಮತಿ. ರಾಜೇಶ್ವರಿ ರವರು ಮಂಡಿಸಿದ ಟಿಪ್ಪಣಿಯನ್ನು ಕಛೇರಿಯಲ್ಲಿ ಸದರಿ ಆಸ್ತಿಗೆ ಸಂಬಂಧಿಸಿದಂತೆ ಇಟ್ಟಿದ್ದ ದಾಖಲೆಗಳನ್ನು ಪರಿಶೀಲಿಸದೆ ಶ್ರೀಮತಿ. ಮಿನಾ ಎಂಬುವವರ ಹೆಸರಿಗೆ ಖಾತೆ ವರ್ಗಾವಣೆಗೆ ಆದೇಶ ಮಾಡಿರುತ್ತೀರಿ. ಆದಕಾರಣ 1 ರಿಂದ 3ನೇ ಆಪಾದಿತ ಸರ್ಕಾರಿ ನೌಕರರಾದ ನೀವು ಸರ್ಕಾರಿ ಸೇವಕರಾಗಿದ್ದು, ನಿಮ್ಮ ಕರ್ತವ್ಯಪಾಲನೆಯಲ್ಲಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಸ್ವಂತ ಲಾಭಕ್ಕಾಗಿ ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ಆಪಾದಿತ ಸರ್ಕಾರಿ ನೌಕರರಾದ ನೀವು ಕರ್ನಾಟಕ ಸರ್ಕಾರಿ ಸೇವಾ (ನಡತೆ) ನಿಯಮಾವಳಿ 1966ರ ನಿಯಮ (3)(1)ನೇ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಎಸಗಿದ್ದೀರಿ.

Therefore, you DGOs have failed to maintain absolute integrity and devotion to duty and committed an act which is unbecoming of Government Servant and thus you are guilty of misconduct under Rule 3(1)(i) to (iii) of KCS (Conduct) Rules 1966.

## ANNEXURE-II

## STATEMENT OF IMPUTATION OF MISCONDUCT

5. ಶ್ರೀಮತಿ ಮಹಾದೇವಿ ಕೋಂ ಲೇಟ್ ರಾಮ, ಕಂಠೇನಹಳ್ಳಿ, ಆಶ್ರಯ ಬಡಾವಣೆ, ಕೆ.ಆರ್.ನಗರ ಟೌನ್, ಮೈಸೂರು ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು, (1) ಮುಖ್ಯಾಧಿಕಾರಿ, ಪುರಸಭಾ ಕಾರ್ಯಾಲಯ, ಕೃಷ್ಣರಾಜನಗರ, ಮೈಸೂರು ಜಿಲ್ಲೆ, (2) ಉಪ ನೋಂದಣಾಧಿಕಾರಿ, ಉಪ ನೋಂದಣಾಧಿಕಾರಿಗಳ ಕಛೇರಿ, ಕೆ.ಆರ್.ನಗರ ಟೌನ್, ಮೈಸೂರು ಜಿಲ್ಲೆ ಮತ್ತು (3) ಶ್ರೀ ವಿ.ಎ.ಗಂಗಾಧರ್ ಬಿನ್ ಲೇಟ್ ಎಂ.ಟಿ.ಆಚಾರ್, ಬಸವೇಶ್ವರ ಬ್ಲಾಕ್, ಕೆ.ಆರ್.ನಗರ ತಾಲ್ಲೂಕು, ಮೈಸೂರು ಜಿಲ್ಲೆ (ಇನ್ನು ಮುಂದೆ '1 ರಿಂದ 3ನೇ ಎದುರುದಾರರುಗಳು' ಎಂದು ಕರೆಯಲ್ಪಡುತ್ತಾರೆ) ರವರುಗಳ ವಿರುದ್ಧ ದಾಖಲಿಸಿ, ಮೈಸೂರು ಜಿಲ್ಲೆಯ ಕೆ.ಆರ್.ನಗರದ ಪುರಸಭೆ ವತಿಯಿಂದ ದೂರುದಾರರ ಪತಿಯಾದ ಶ್ರೀ ರಾಮು ರವರಿಗೆ 20 * 30 ಅಳತೆಯ ಆಶ್ರಯ ನಿವೇಶನ ಸಂಖ್ಯೆ: 39ನ್ನು ದಿನಾಂಕ: 18/07/1993 ರಲ್ಲಿ ನೀಡಲಾಗಿರುತ್ತದೆಂದು, ಹೀಗಿರುವಾಗ ಸದರಿ ನಿವೇಶನವನ್ನು ಶ್ರೀ ವಿ.ಎ.ಗಂಗಾಧರ ಎಂಬುವವರು ಶ್ರೀಮತಿ ಮೀನಾ ರವರಿಗೆ ರೂ.1.35 ಲಕ್ಷಗಳಿಗೆ ಪರಬಾರೆ ಮಾಡಿರುತ್ತಾರೆಂದು ತಿಳಿಸಿರುತ್ತಾರೆ. ಮತ್ತೆ ಮುಂದುವರೆದು, ದೂರುದಾರರ ಪತಿಯಾಗಲೀ ಅಥವಾ ದೂರುದಾರರು ಅಥವಾ ಅವರ ಮಕ್ಕಳಾಗಲೀ ಯಾರು ಸದರಿ ನಿವೇಶನವನ್ನು ಶ್ರೀ ವಿ.ಎ.ಗಂಗಾಧರ ಎಂಬುವವರಿಗೆ ಕ್ರಯ ಮಾಡಿರುವುದಿಲ್ಲ, ಆದರೆ ಶ್ರೀ ವಿ.ಎ.ಗಂಗಾಧರ ರವರು ಪುರಸಭೆಯ ಕೆಲವು ಸಿಬ್ಬಂದಿಗಳೊಂದಿಗೆ ಶಾಮೀಲಾಗಿ ದೂರುದಾರರ ಪತಿಯವರಿಗೆ ಸೇರಿದ ನಿವೇಶನವನ್ನು ಶ್ರೀಮತಿ ಮೀನಾ ರವರಿಗೆ ದಿನಾಂಕ: 20/01/2015 ರಂದು ಕ್ರಯಕ್ಕೆ ಪರಬಾರೆ ಮಾಡಿರುತ್ತಾರೆಂದು ಹಾಗೂ ದೂರುದಾರರ ಪತಿ ದಿನಾಂಕ: 10/01/2015 ರಂದು ಮೃತ ಹೊಂದಿರುತ್ತಾರೆಂದು ತಿಳಿಸಿರುತ್ತಾರೆ. ಆದಕಾರಣ, ದೂರುದಾರರ ಪತಿಯ ಹೆಸರಿನಲ್ಲಿದ್ದ ನಿವೇಶನವನ್ನು ಅಕ್ರಮವಾಗಿ ಮಾರಾಟ ಮಾಡಿರುವವರ ವಿರುದ್ಧ ಹಾಗೂ ಅಕ್ರಮವಾಗಿ ಖಾತೆ ಮಾಡಿಕೊಟ್ಟಿರುತ್ತಾರೆಂದು ಆರೋಪಿಸಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿಯಲ್ಲಿ ಪ್ರದತ್ತವಿರುವ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

6. ದೂರುದಾರರು ಸಲ್ಲಿಸಿರುವ ದೂರಿಗೆ 2ನೇ ಎದುರುದಾರರಾದ ಉಪ ನೋಂದಣಾಧಿಕಾರಿ, ಕೆ.ಆರ್.ನಗರ ತಾಲ್ಲೂಕು ರವರ ದಿನಾಂಕ: 25/11/2015 ರಂದು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. ಸದರಿ ಆಕ್ಷೇಪಣೆಯಲ್ಲಿ, ಶ್ರೀ ವಿ.ಎ.ಗಂಗಾಧರ ಎಂಬುವವರು ಸ್ವತ್ತಿನ ಖಾತಾ ನಂ. 9550 ಸೈಟ್ ನಂ. 30, ವಿಸ್ತೀರ್ಣ ಪೂರ್ವ ಪಶ್ಚಿಮ 30 ಅಡಿ, ಉತ್ತರ ದಕ್ಷಿಣ 20 ಅಡಿಗಳುಳ್ಳ ನಿವೇಶನವನ್ನು ಶ್ರೀಮತಿ ಮೀನಾ ಎಂಬುವವರಿಗೆ ದಿನಾಂಕ: 21/01/2015 ರಂದು ರೂ.1,35,000/- ಗಳಿಗೆ ಕ್ರಯ ಪತ್ರವನ್ನು ಬರೆಸಿರುವುದರಿಂದ ಸದರಿ ಪತ್ರದ ನೋಂದಣಿಯನ್ನು ಮಾಡುವಾಗ ಯಾವುದೇ ಕಾನೂನನ್ನು ಉಲ್ಲಂಘನೆ ಮಾಡಿರುವುದಿಲ್ಲವೆಂದು ತಿಳಿಸಿರುತ್ತಾರೆ ಹಾಗೂ ಹಾಗೂ ನೋಂದಣಿಯನ್ನು ಕ್ರಮಬದ್ಧವಾಗಿ ನಿಯಮಗಳನುಸಾರ ನೋಂದಾಯಿಸಲಾಗಿದೆ ಎಂದು ತಿಳಿಸುತ್ತಾ, ಶ್ರೀ ವಿ.ಎ.ಗಂಗಾಧರ ರವರು ನೋಂದಣಿ ಸಮಯದಲ್ಲಿ ಹಾಜರುಪಡಿಸಿದ ಎಲ್ಲಾ ದಾಖಲೆ ಪತ್ರಗಳನ್ನು ದೃಢೀಕರಿಸಿ ಸಲ್ಲಿಸಿರುತ್ತಾರೆ.

7. 1ನೇ ಎದುರುದಾರರಾದ ಮುಖ್ಯಾಧಿಕಾರಿ, ಪುರಸಭೆ, ಕೆ.ಆರ್.ನಗರ ತಾಲ್ಲೂಕು ರವರು ದಿನಾಂಕ: 27/11/2015 ರಂದು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. ಸದರಿ ಆಕ್ಷೇಪಣೆಯಲ್ಲಿ, ಶ್ರೀ ರಾಮ ಬಿನ್ ಚಿಕ್ಕನಾಯಕ ಇವರಿಗೆ ಆಶ್ರಯ ಯೋಜನೆಯಡಿ ಕೃಷ್ಣರಾಜನಗರ ಪಟ್ಟಣ ಸ್ಲಂ ಬೋರ್ಡ್ ಮನೆಗಳ ಸಮೀಪ 20 * 30 ವಿಸ್ತೀರ್ಣವುಳ್ಳ 39ನೇ ನಂಬರಿನ ನಿವೇಶನವನ್ನು ನೀಡಿರುವುದು ದೂರುದಾರರು ಸಲ್ಲಿಸಿರುವ ಹಕ್ಕು ಪತ್ರದಿಂದ ಕಂಡುಬಂದಿರುತ್ತದೆಂದು ಹಾಗೂ ಇದಕ್ಕೆ ಸಂಬಂಧಪಟ್ಟಂತೆ ಕಛೇರಿಯ ದಾಖಲೆಗಳನ್ನು ಪರಿಶೀಲಿಸಲಾಗಿ 1993-94ನೇ ಸಾಲಿನ ಅಸೆಸ್ಮಂಟ್ ವಹಿಯಲ್ಲಿ ರಾಮ ಬಿನ್ ಚಿಕ್ಕನಾಯಕ ರವರ ಹೆಸರನ್ನು ನಮೂದಿಸಿದ್ದು ಹಕ್ಕು (ಖಾತೆ) ದಾಖಲಿಸಿರುವ ಬಗ್ಗೆ ಆಗಿನ ಮುಖ್ಯಾಧಿಕಾರಿ ದೃಢೀಕರಿಸಿರುವುದಿಲ್ಲ. ಮುಖ್ಯಾಧಿಕಾರಿ ದೃಢೀಕರಿಸಿಲ್ಲವಾದ್ದರಿಂದ ನಿಯಮಾನುಸಾರ ಹಕ್ಕು ದಾಖಲಾಗದಿರುವುದು ಕಂಡುಬಂದಿರುತ್ತದೆಂದು ತಿಳಿಸಿರುತ್ತಾರೆ.

8. ಮತ್ತೆ ಮುಂದುವರೆದು, ನಂತರದ ವರ್ಷಗಳ ದಾಖಲೆಗಳನ್ನು ಪರಿಶೀಲಿಸಲಾಗಿ ಶ್ರೀ ವಿ.ಗಂಗಾಧರ್ ಬಿನ್ ಎಂ.ಟಿ.ಆಚಾರ್ ರವರಿಗೆ ಹಕ್ಕು ದಾಖಲಾಗಿದ್ದು ಇವರಿಂದ ಶ್ರೀಮತಿ ಮೀನಾ ಕೋಂ ರಮೇಶ್ ಇವರ ಹೆಸರಿಗೆ ಹಕ್ಕು ವರ್ಗಾವಣೆಯಾಗಿರುವುದು ಕಂಡುಬರುತ್ತದೆಂದು ಹಾಗೂ ಆಶ್ರಯ ಯೋಜನೆ ಹಕ್ಕು ಪತ್ರವನ್ನು 1993ರಲ್ಲಿ ವಿತರಿಸಿರುವುದು ದೂರುದಾರರು ದೂರಿನ ಜೊತೆಗೆ ಲಗತ್ತಿಸಿರುವ ಹಕ್ಕುಪತ್ರದಿಂದ ಕಂಡುಬಂದಿದ್ದು, ಶ್ರೀ ರಾಮ ಬಿನ್ ಚಿಕ್ಕನಾಯಕ ರವರು ಹಕ್ಕುಪತ್ರದ ಆಧಾರದ ಮೇಲೆ ಹಕ್ಕು (ಖಾತೆ) ನೋಂದಾಯಿಸಲು ಈ ಕಛೇರಿಗೆ ಅರ್ಜಿ ನೀಡಿರುವುದು ಕಂಡುಬರುವುದಿಲ್ಲ ಹಾಗೂ ದೂರುದಾರರ ತಮ್ಮ ಅರ್ಜಿಯಲ್ಲಿ ತಿಳಿಸಿರುವಂತೆ, ತಮ್ಮ ಪತಿ ಸಾವಿನ ನಂತರ ಪೌತಿ ಸಬೂಬು ತಮ್ಮ ಹೆಸರಿಗೆ ಹಕ್ಕು (ಖಾತೆ) ನೋಂದಾಯಿಸಲು ಅರ್ಜಿ ಸಲ್ಲಿಸಿರುವುದಿಲ್ಲ ಹಾಗೂ ಬೇರೆಯವರ ಹೆಸರಿಗೆ ಸದರಿ ನಿವೇಶನ ಹಕ್ಕು (ಖಾತೆ) ನೋಂದಾಯಿಸಿರುವುದಕ್ಕೆ ತಕರಾರನ್ನು ಈವರೆಗೆ ಈ ಕಛೇರಿಗೆ ನೀಡಿರುವುದಿಲ್ಲ. ಅಲ್ಲದೇ ದೂರುದಾರರು ತಮ್ಮ ದೂರಿನಲ್ಲಿ ನಿವೇಶನದ ಹಕ್ಕುಪತ್ರ ಕಳೆದು ಹೋಗಿರುತ್ತದೆಂದು ತಿಳಿಸಿರುತ್ತಾರೆ. ಆದ್ದರಿಂದ ಮೇಲ್ಕಂಡ ಎಲ್ಲರಿಗೂ ಮೂಲ ದಾಖಲೆಗಳನ್ನು ಒದಗಿಸುವಂತೆ ಮೂರು ನೋಟಿಸ್‌ಗಳನ್ನು ಕಾಲಾವಕಾಶ ನೀಡಿ ಜಾರಿ ಮಾಡಿ ನಂತರ ಕ್ರಮ ವಹಿಸಬೇಕಾಗಿರುತ್ತದೆಂದು ತಿಳಿಸಿರುತ್ತಾರೆ.

9. ದೂರುದಾರರಾದ ಶ್ರೀಮತಿ ಮಹಾದೇವಿ ರವರು ದಿನಾಂಕ: 08/03/2016 ರಂದು ತಮ್ಮ ಪ್ರತ್ಯುತ್ತರವನ್ನು ಸಲ್ಲಿಸಿರುತ್ತಾರೆ. ಸದರಿ ಪ್ರತ್ಯುತ್ತರದಲ್ಲಿ ದೂರಿನಲ್ಲಿನ ಅಂಶಗಳನ್ನೇ ಪುನರಾವರ್ತನೆ ಮಾಡಿರುತ್ತಾರೆ.

10. ದೂರುದಾರರು ಸಲ್ಲಿಸಿರುವ ದೂರು, 1 ಮತ್ತು 2ನೇ ಎದುರುದಾರರು ಸಲ್ಲಿಸಿರುವ ಆಕ್ಷೇಪಣೆ ಮತ್ತು ದೂರುದಾರರು ಸಲ್ಲಿಸಿರುವ ಪ್ರತ್ಯುತ್ತರವನ್ನು ಪರಿಶೀಲಿಸಲಾಗಿ ಕಂಡುಬರುವುದೇನೆಂದರೆ, ದೂರುದಾರರ ಪತಿಯಾದ ಶ್ರೀ ರಾಮು ರವರಿಗೆ 20 * 30 ಅಳತೆಯ ಆಶ್ರಯ ನಿವೇಶನ ಸಂಖ್ಯೆ: 39ನ್ನು ದಿನಾಂಕ: 18/07/1993 ರಲ್ಲಿ

ನೀಡಲಾಗಿರುತ್ತದೆಂದು, ಆದರೆ, ಶ್ರೀ ವಿ.ಎ.ಗಂಗಾಧರ್ ಎಂಬುವವರು ನಕಲಿ ದಾಖಲೆಗಳನ್ನು ಸೃಷ್ಟಿಸಿಕೊಂಡು ಮೇಲ್ಕಂಡ ನಿವೇಶನವನ್ನು ಅಕ್ರಮವಾಗಿ ಶ್ರೀಮತಿ ಮೀನಾ ರವರಿಗೆ ರೂ.1,35,000/- ಗಳಿಗೆ ಪರಬಾರೆ ಮಾಡಿರುತ್ತಾರೆ ಎಂಬುದು ದೂರುದಾರರ ಆಪಾದನೆಯಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ಮುಖ್ಯಾಧಿಕಾರಿ, ಕೆ.ಆರ್.ನಗರ ರವರು ಸಂಬಂಧಪಟ್ಟವರಿಗೆ ಮೂಲ ದಾಖಲೆಗಳನ್ನು ಒದಗಿಸುವಂತೆ ಮೂರು ನೋಟಿಸ್‌ಗಳನ್ನು ಕಾಲಾವಕಾಶ ನೀಡಿ ಜಾರಿ ಮಾಡಿ ನಂತರ ಕ್ರಮ ವಹಿಸಬೇಕಾಗಿರುತ್ತದೆಂದು ತಿಳಿಸಿರುತ್ತಾರೆ. ಆದರೆ, ಇದುವರೆವಿಗೂ ಕಾನೂನು ರೀತ್ಯಾ ಕೈಗೊಂಡ ಮುಂದಿನ ಕ್ರಮದ ಬಗ್ಗೆ ಯಾವುದೇ ವರದಿಯನ್ನು ಸಲ್ಲಿಸಿರುವುದಿಲ್ಲ.

11. ಈ ಸಂಬಂಧ, ದೂರುದಾರರು ಹಾಗೂ ಎದುರುದಾರರುಗಳಿಗೆ, ಪ್ರಶ್ನಿತ ಸ್ವತ್ತಿಗೆ ಸಂಬಂಧಪಟ್ಟ ಮೂಲ ದಾಖಲೆಗಳೊಂದಿಗೆ ಗೌರವಾನ್ವಿತರ ಮುಂದೆ ಖುದ್ದಾಗಿ ಹಾಜರಾಗಬೇಕಾಗಿ ತಿಳಿಸಿ ಸಮನ್ಸ್ ಕಳುಹಿಸಲಾಗಿದ್ದು, ದೂರುದಾರರು ಹಾಗೂ ಮುಖ್ಯಾಧಿಕಾರಿಗಳಿಬ್ಬರು ಗೌರವಾನ್ವಿತರ ಮುಂದೆ ಹಾಜರಾಗಿರುತ್ತಾರೆ ಹಾಗೂ ಮುಖ್ಯಾಧಿಕಾರಿಗಳು ವಿವರವಾದ ವರದಿಯನ್ನು ದಿನಾಂಕ: 01/12/2015 ಮತ್ತು 03/09/2016ರ ಪತ್ರಗಳ ರೀತ್ಯಾ ಸಲ್ಲಿಸಿರುತ್ತಾರೆ. ಸದರಿ ವರದಿಯಲ್ಲಿ, ಕಛೇರಿಯ ದಾಖಲೆಗಳನ್ನು ಪರಿಶೀಲಿಸಲಾಗಿ 1993-94ನೇ ಸಾಲಿನ ಆಸ್ತಿ ರಿಜಿಸ್ಟರ್‌ನಲ್ಲಿ ಆಸ್ತಿ ಸಂಖ್ಯೆ: 9550/39 ಅಳತೆಯು 20 * 30 ಅಡಿಗಳು ಶ್ರೀ ರಾಮ ಬಿನ್ ಚಿಕ್ಕನಾಯಕ ರವರ ಹೆಸರಿನಲ್ಲಿ ದಾಖಲಾಗಿರುತ್ತದೆಂದು, ಆದರೆ ಸದರಿ ಆಸ್ತಿ ನಂ. 9550/39 ಅಳತೆ 20 * 30 ಅಡಿಗಳು ಶ್ರೀ ರಾಮ ಬಿನ್ ಚಿಕ್ಕನಾಯಕ ರವರ ಹೆಸರಿನಿಂದ ಶ್ರೀ ವಿ.ಎ.ಗಂಗಾಧರ್ ಬಿನ್ ಎಂ.ಟಿ.ಆಚಾರ್ ರವರ ಹೆಸರಿಗೆ ನೋಟರಿ ಪ್ರಮಾಣ ಪತ್ರದ ಆಧಾರದ ಮೇರೆಗೆ ವಿಷಯ ನಿರ್ವಾಹಕರಾದ ಶ್ರೀಮತಿ ರಾಜೇಶ್ವರಿ ಹಾಗೂ ಮುಖ್ಯಾಧಿಕಾರಿಯಾಗಿದ್ದ ಶ್ರೀ ನಾಗರಾಜು ರವರ ಆಜ್ಞಾನುಸಾರ ಆಸ್ತಿ ಹಕ್ಕು ವರ್ಗಾವಣೆಯನ್ನು ದಿನಾಂಕ: 22/10/2010ನೇ ಸಾಲಿನಲ್ಲಿ ಹಕ್ಕು ವರ್ಗಾವಣೆ ಮಾಡಿರುತ್ತಾರೆಂದು ತಿಳಿಸಿರುತ್ತಾರೆ. ತದನಂತರ ಶ್ರೀ ವಿ.ಎ.ಗಂಗಾಧರ್ ಬಿನ್ ಎಂ.ಟಿ.ಆಚಾರ್ ರವರು ದಿನಾಂಕ: 22/01/2015 ರಂದು ಶ್ರೀಮತಿ ಮೀನಾ ಕೋಂ ರಮೇಶ್ ರವರ ಹೆಸರಿಗೆ ಕ್ರಯ ಪತ್ರದ ಮೂಲಕ ಆಸ್ತಿ ಹಕ್ಕು ವರ್ಗಾವಣೆ ಆಗಿರುತ್ತದೆಂದು ತಿಳಿಸಿರುತ್ತಾರೆ.

12. ಆದ್ದರಿಂದ, ಗೌರವಾನ್ವಿತರು ಒಪ್ಪಿದಲ್ಲಿ, (1) ಶ್ರೀಮತಿ ರಾಜೇಶ್ವರಿ, ವಿಷಯ ನಿರ್ವಾಹಕರು, ಪುರಸಭಾ ಕಾರ್ಯಾಲಯ, ಕೃಷ್ಣರಾಜನಗರ, ಮೈಸೂರು ಜಿಲ್ಲೆ, ಹಾಗೂ (2) ಶ್ರೀ ಕೆ.ಸಿ.ನಾಗರಾಜು, ಮುಖ್ಯಾಧಿಕಾರಿ, ಪುರಸಭಾ ಕಾರ್ಯಾಲಯ, ಕೃಷ್ಣರಾಜನಗರ, ಮೈಸೂರು ಜಿಲ್ಲೆ ಮತ್ತು (3) ಶ್ರೀ ಚಿಕ್ಕನಂಜಯ್ಯ, ಹಿಂದಿನ ಮುಖ್ಯಾಧಿಕಾರಿಗಳು, ಕೃಷ್ಣರಾಜನಗರ ತಾಲ್ಲೂಕು, ಮೈಸೂರು ಜಿಲ್ಲೆ (ಹಾಲಿ ಪ್ರಾಜೆಕ್ಟ್ ಆಫಿಸರ್, ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಛೇರಿ, ಮೈಸೂರು ರವರುಗಳನ್ನು ಕ್ರಮವಾಗಿ 4 ರಿಂದ 6ನೇ ಎದುರುದಾರರುಗಳನ್ನಾಗಿ ಮುಖಪುಟದಲ್ಲಿ implead ಮಾಡಿ, ಸದರಿಯವರುಗಳಿಗೆ ಆಕ್ಷೇಪಣೆಯನ್ನು ಸಲ್ಲಿಸುವಂತೆ ತಿಳಿಸಲಾಗಿರುತ್ತದೆ.

13. 4, 5 ಮತ್ತು 6ನೇ ಎದುರುದಾರರುಗಳು ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಿದ್ದು ತಮ್ಮ ವಿರುದ್ದದ ಆರೋಪಗಳ ಕರ್ತವ್ಯ ಲೋಪಗಳನ್ನ ಅಲ್ಲಗಳೆದಿರುತ್ತಾರೆ. ಆದರೆ, ಕಡತಗಳಲ್ಲಿ 4, 5 ಮತ್ತು 6ನೇ ಎದುರುದಾರರುಗಳ ವಿರುದ್ಧ ಕರ್ತವ್ಯ ಲೋಪ ಮೇಲ್ನೋಟಕ್ಕೆ ಕಂಡುಬಂದಿರುವ ಹಿನ್ನಲೆಯಲ್ಲಿ ಸದರಿ ಎದುರುದಾರರುಗಳ ಆಕ್ಷೇಪಣೆಗಳನ್ನ ಈ ಸಂದರ್ಭದಲ್ಲಿ ಒಪ್ಪಲು ಸಾಧ್ಯವಿರುವುದಿಲ್ಲ. ಹಾಗೂ 6ನೇ ಎದುರುದಾರರು ಈ ಕಛೇರಿಯಿಂದ ಕಳುಹಿಸಲಾದ ಪತ್ರವನ್ನು ಸ್ವೀಕರಿಸಿದರೂ ಸಹಾ, ಯಾವುದೇ ಉತ್ತರವನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ದೂರುದಾರರ ಉತ್ತರ ಇಲ್ಲವೆಂದು ಪರಿಗಣಿಸಿ ಕಡತವನ್ನು ಅಂತಿಮ ಪರಿಶೀಲನಾ ಟಿಪ್ಪಣಿ ಮಂಡಿಸುವಿಕೆಗಾಗಿ ಗೌರವಾನ್ವಿತರು ಕಂಡಿಕೆ 70ರಲ್ಲಿ ಆದೇಶಿಸಿರುತ್ತಾರೆ.

14. ಈ ಮಧ್ಯೆ ದಿನಾಂಕ: 24/11/2016 ರಂದು 6ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿ, ತಮ್ಮ ವಿರುದ್ಧದ ಆರೋಪಗಳ ಕರ್ತವ್ಯ ಲೋಪಗಳನ್ನ ಅಲ್ಲಗಳೆದಿರುತ್ತಾರೆ. ಆದರೆ, ಕಡತಗಳಲ್ಲಿ 6ನೇ ಎದುರುದಾರರುಗಳ ವಿರುದ್ಧ ಕರ್ತವ್ಯ ಲೋಪ ಮೇಲ್ನೋಟಕ್ಕೆ ಕಂಡುಬಂದಿರುವ ಹಿನ್ನಲೆಯಲ್ಲಿ ಸದರಿ ಎದುರುದಾರರ ಆಕ್ಷೇಪಣೆಯನ್ನು ಈ ಸಂದರ್ಭದಲ್ಲಿ ಒಪ್ಪಲು ಸಾಧ್ಯವಿರುವುದಿಲ್ಲ.

15. ದೂರಿನಲ್ಲಿ ಇರುವ ಆಪಾದನೆಗಳು, ಎದುರುದಾರರ ಆಕ್ಷೇಪಣೆಗಳು ಹಾಗೂ ತನಿಖಾ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ ಎದುರುದಾರರುಗಳು ಈ ಕೆಳಕಂಡಂತೆ ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

**16. ದೂರಿನಲ್ಲಿ ಇರುವ ಆಪಾದನೆಗಳು, ಎದುರುದಾರರ ಆಕ್ಷೇಪಣೆ ಹಾಗೂ ಪ್ರತ್ಯುತ್ತರವನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ 2 ರಿಂದ 6ನೇ ಎದುರುದಾರರುಗಳು ಈ ಕೆಳಕಂಡಂತೆ ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.**

- ಕೆ.ಆರ್.ನಗರ ಪುರಸಭೆಯ ಆಸ್ತಿ ಸಂಖ್ಯೆ: 9550/39 ಅಳತೆಯು 20 * 30 ಅಡಿಗಳು ಶ್ರೀ ರಾಮ ಬಿನ್ ಚಿಕ್ಕನಾಯಕ ರವರ ಹೆಸರಿನಲ್ಲಿ ದಾಖಲಾಗಿರುತ್ತದೆ.
- ಆದರೆ ಸದರಿ ಆಸ್ತಿ ನಂ. 9550/39 ಅಳತೆ 20 * 30 ಅಡಿಗಳು ಏಕಾಏಕಿಯಾಗಿ ಶ್ರೀ ರಾಮ ಬಿನ್ ಚಿಕ್ಕನಾಯಕ ರವರ ಹೆಸರಿನಿಂದ ಶ್ರೀ ವಿ.ಎ.ಗಂಗಾಧರ್ ಬಿನ್ ಎಂ.ಟಿ.ಆಚಾರ್ ರವರ ಹೆಸರಿಗೆ ನೋಟರಿ ಪ್ರಮಾಣ ಪತ್ರದ ಆಧಾರದ ಮೇರೆಗೆ 4ನೇ ಎದುರುದಾರರಾದ ಶ್ರೀಮತಿ ರಾಜೇಶ್ವರಿ, ವಿಷಯ ನಿರ್ವಾಹಕರು ಕೂಲಂಕಷವಾಗಿ ಕಡತವನ್ನು ಪರಿಶೀಲಿಸಿದೇ ಕೇವಲ ನೋಟರಿ ಪ್ರಮಾಣ ಪತ್ರದ ಮೇಲೆ ಖಾತೆ ಬದಲಾವಣೆಗೆ ಟಿಪ್ಪಣಿ ತಯಾರಿಸಿ ಶಿಫಾರಸ್ಸು ವರದಿಯೊಂದಿಗೆ 5ನೇ ಶ್ರೀ.ಕೆ.ಸಿ.ನಾಗರಾಜು, ಮುಖ್ಯಾಧಿಕಾರಿಗಳು ರವರ ಸಹಿಗಾಗಿ ಮಂಡಿಸಿರುತ್ತಾರೆ.
- 5ನೇ ಎದುರುದಾರರಾದ ಶ್ರೀ ಕೆ.ಸಿ.ನಾಗರಾಜು, ಮುಖ್ಯಾಧಿಕಾರಿಗಳಾಗಲೀ 4ನೇ ಎದುರುದಾರರು ಮಂಡಿಸಿರುವ ಟಿಪ್ಪಣಿಯನ್ನು ಕಛೇರಿಯಲ್ಲಿನ ದಾಖಲೆಗಳಿಗೆ ತಾಳೆ ಮಾಡಿ ಪರಿಶೀಲಿಸದೇ ಶ್ರೀ ವಿ.ಎ.ಗಂಗಾಧರ ಬಿನ್ ಎಂ.ಬಿ.ಆಚಾರ್ ರವರ ಹೆಸರಿಗೆ ದಿನಾಂಕ: 22/10/2010ನೇ ಸಾಲಿನಲ್ಲಿ ಹಕ್ಕು ವರ್ಗಾವಣೆ ಮಾಡಿರುತ್ತಾರೆ.
- ತದನಂತರ 3ನೇ ಎದುರುದಾರರಾದ ಶ್ರೀ ವಿ.ಎ.ಗಂಗಾಧರ್ ಬಿನ್ ಎಂ.ಟಿ.ಆಚಾರ್ ರವರು ದಿನಾಂಕ: 22/01/2015 ರಂದು ಶ್ರೀಮತಿ ಮೀನಾ ಕೋಂ ರಮೇಶ್ ರವರ ಹೆಸರಿಗೆ ಕ್ರಯ ಪತ್ರದ ಮೂಲಕ ಆಸ್ತಿ ಹಕ್ಕು ವರ್ಗಾವಣೆ ಮಾಡಿಕೊಡುವಂತೆ ಕೋರಿ 2ನೇ ಎದುರುದಾರರಾದ ಶ್ರೀ ಚೆಲುವಾರಾಜು, ಉಪ ನೋಂದಣಾಧಿಕಾರಿಗಳು, ಕೃಷ್ಣರಾಜನಗರ ತಾಲ್ಲೂಕು ರವರಿಗೆ ಮೇಲ್ಕಂಡ ಸ್ವತ್ತಿಗೆ ಸಂಬಂಧಪಟ್ಟ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ.
- 2ನೇ ಎದುರುದಾರಾದ ಶ್ರೀ ಚೆಲುವಾರಾಜು, ಉಪ ನೋಂದಣಾಧಿಕಾರಿಗಳು, ಕೃಷ್ಣರಾಜನಗರ ತಾಲ್ಲೂಕು ರವರು 3ನೇ ಎದುರುದಾರರಾದ ಶ್ರೀ ವಿ.ಎ.ಗಂಗಾಧರ್ ಬಿನ್ ಎಂ.ಟಿ.ಆಚಾರ್ ರವರ ಹೆಸರಿನಿಂದ ಶ್ರೀಮತಿ ಮೀನಾ ಕೋಂ ರಮೇಶ್ ರವರ ಹೆಸರಿಗೆ ನೋಂದಣಿ ಕ್ರಯ ಪತ್ರವನ್ನು ಮಾಡುವ ಮೊದಲು ಅವಶ್ಯಕವಿರುವ ದಾಖಲಾತಿಗಳನ್ನು ಅಂದರೆ mother

deed, ಖಾತಾ ಪತ್ರ, ಸ್ಕೆಚ್ ಹಾಗೂ ಇತರೆ ದಾಖಲಾತಿಗಳನ್ನು ಪಡೆದು ಪರಿಶೀಲಿಸಿ ನಂತರ ನೋಂದಣಿ ಮಾಡಬೇಕಾಗಿರುವುದು 2ನೇ ಎದುರುದಾರರ ಆದ್ಯ ಕರ್ತವ್ಯವಾಗಿರುತ್ತದೆ. ಆದರೆ, 2ನೇ ಎದುರುದಾರರು ಮೇಲ್ಕಂಡ ನಿವೇಶನವನ್ನು ನೋಂದಣಿ ಮಾಡುವ ಮೊದಲು ಮೇಲ್ಕಂಡ mother deed ನ್ನು ಪಡೆದು ಪರಿಶೀಲಿಸಿ ನಂತರ ಕ್ರಯ ಪತ್ರವನ್ನು ನೋಂದಣಿ ಮಾಡಿರುವುದು ಕಂಡುಬರುವುದಿಲ್ಲ.

- ಆದ್ದರಿಂದ, 2ನೇ ಎದುರುದಾರರಾದ ಶ್ರೀ ಚಲುವರಾಜು, ಉಪನೋಂದಣಾಧಿಕಾರಿ, ಕೃಷ್ಣರಾಜನಗರ, ಮೈಸೂರು ರವರು ಕ್ರಯ ಪತ್ರ ನೋಂದಣಿ ಮಾಡುವ ಮೊದಲು ಅವಶ್ಯಕತೆ ಇರುವ mother deed ನ್ನು ಪಡೆಯದೇ 3ನೇ ಎದುರುದರರಾದ ಶ್ರೀ ವಿ.ಎ.ಗಂಗಾಧರ್ ಬಿನ್ ಎಂ.ಟಿ.ಆಚಾರ್ ರವರ ಹೆಸರಿನಿಂದ ಶ್ರೀಮತಿ ಮೀನಾ ಕೋಂ ರಮೇಶ್ ರವರ ಹೆಸರಿಗೆ ನೋಂದಣಿ ಕ್ರಯ ಪತ್ರ ಮಾಡುವ ಮೂಲಕ ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.
- ಪುನ: ಶ್ರೀಮತಿ ಮೀನಾ ಕೋಂ ರಮೇಶ್ ರವರು ನೋಂದಣಿ ಕ್ರಯ ಪತ್ರದ ಆಧಾರದ ಮೇಲೆ ಅವರ ಹೆಸರಿಗೆ ಖಾತಾ ವರ್ಗಾವಣೆ ಮಾಡಿಕೊಡಬೇಕಾಗಿ ಅರ್ಜಿ ಸಲ್ಲಿಸಲಾಗಿ, 4ನೇ ಎದುರುದಾರರಾದ ಶ್ರೀಮತಿ ರಾಜೇಶ್ವರಿ, ವಿಷಯ ನಿರ್ವಾಹಕರು ಕೂಲಂಕಷವಾಗಿ ಕಡತವನ್ನು ಪರಿಶೀಲಿಸಿದೇ ಮತ್ತೆ ಶ್ರೀಮತಿ ಮೀನಾ ರವರ ಹೆಸರಿಗೆ ಖಾತಾ ವರ್ಗಾವಣೆ ಮಾಡಬಹುದೆಂಬ ಶಿಫಾರಸ್ಸು ವರದಿಯನ್ನು 6ನೇ ಎದುರುದಾರರಾದ ಮುಖ್ಯಾಧಿಕಾರಿಗಳಿಗೆ ಸಲ್ಲಿಸಿರುತ್ತಾರೆ.
- 6ನೇ ಎದುರುದಾರರಾದ ಶ್ರೀ ಚಿಕ್ಕನಂಜಯ್ಯ, ಮುಖ್ಯಾಧಿಕಾರಿಗಳು, ಕೃಷ್ಣರಾಜನಗರ ತಾಲ್ಲೂಕು, ಮೈಸೂರು ಜಿಲ್ಲೆ ರವರು 4ನೇ ಎದುರುದಾರರು ಮಂಡಿಸಿರುವ ಟಿಪ್ಪಣಿಯನ್ನು ಕಛೇರಿಯಲ್ಲಿನ ದಾಖಲೆಗಳಿಗೆ ತಾಳೆ ಮಾಡಿ ಪರಿಶೀಲಿಸದೇ ಶ್ರೀಮತಿ ಮೀನಾ ರವರ ಹೆಸರಿಗೆ ದಿನಾಂಕ: 31/01/2015 ರಂದು ಖಾತಾ ವರ್ಗಾವಣೆ ಮಾಡಿರುತ್ತಾರೆ.

17. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, 2, 4, 5 ಮತ್ತು 6ನೇ ಎದುರುದಾರರುಗಳು ಸಾರ್ವಜನಿಕ/ ಸರ್ಕಾರಿ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸಾರ್ವಜನಿಕ/ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವರ್ತನೆ/ದುರ್ನಡತೆ ಎಸಗಿದ್ದಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

18. ಸದರಿ 5ನೇ ಎದುರುದಾರರಾದ ಶ್ರೀ ಕೆ.ಸಿ.ನಾಗರಾಜು, ಮುಖ್ಯಾಧಿಕಾರಿಗಳು, ಕೃಷ್ಣರಾಜನಗರ ತಾಲ್ಲೂಕು ರವರು ದಿನಾಂಕ: 31/03/2011 ರಲ್ಲಿ ನಿವೃತ್ತಿ ಹೊಂದಿದ್ದು, ಸದರಿ ಕರ್ತವ್ಯ ಲೋಪವು 2010ನೇ ಇಸ್ವಿಯಲ್ಲಿ ಹಕ್ಕು ವರ್ಗಾವಣೆ ಮಾಡಿರುವ ಸಂಬಂಧವಾಗಿದ್ದು, ಸದರಿ ಘಟನೆಯು 4 ವರ್ಷಕ್ಕಿಂತ ಹೆಚ್ಚು ಹಿಂದಿನದ್ದಾಗಿರುವ ಕಾರಣ 5ನೇ ಎದುರುದಾರರ ವಿರುದ್ಧ ಕೆ.ಸಿ.ಎಸ್.ಆರ್., 214 (2) (ಬಿ) (ii) ರಡಿ ತನಿಖೆ ಕೈಗೊಳ್ಳಲು ಅವಕಾಶ ಇರುವುದಿಲ್ಲ. ಹಾಗಾಗಿ ಸದರಿಯವರ ವಿರುದ್ಧ ಪ್ರಕ್ರಿಯೆಯನ್ನು ಕೈಬಿಡಬಹುದಾಗಿರುತ್ತದೆ.

19. 1ನೇ ಎದುರುದಾರರಾದ ಶ್ರೀ ನಾಗಶೆಟ್ಟಿ, ಮುಖ್ಯಾಧಿಕಾರಿಗಳು, ಕೃಷ್ಣರಾಜನಗರ ತಾಲ್ಲೂಕು, ಮೈಸೂರು ಜಿಲ್ಲೆ ರವರು ದಿನಾಂಕ: 15/06/2015 ರಿಂದ ಮುಖ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿರುವ ಕಾರಣ, ಹಾಗೂ ಸದರಿ ಲೋಪವು 2010 ಹಾಗೂ 2015ನೇ ಸಾಲಿಗೆ ಸಂಬಂಧಪಟ್ಟಿರುವ ಕಾರಣ, ಸದರಿಯವರ ವಿರುದ್ಧ ಆರೋಪವು ಸಾಬೀತಾಗಿರದೇ ಇರುವ ಕಾರಣ ಅವರ ವಿರುದ್ಧ ಪ್ರಕ್ರಿಯೆಯನ್ನು ಕೈಬಿಡಬಹುದಾಗಿದೆ. ಹಾಗೂ 3ನೇ

ಎದುರುದಾರರಾದ ಶ್ರೀ ವಿ.ಎ.ಗಂಗಾಧರ್ ರವರು ಖಾಸಗಿ ವ್ಯಕ್ತಿಯಾಗಿರುವ ಕಾರಣ ಸದರಿಯವರ ವಿರುದ್ದ ಸಹಾ ಪ್ರಕ್ರಿಯೆಯನ್ನು ಕೈಬಿಡಬಹುದಾಗಿದೆ.

20. ಸದರಿ 4ನೇ ಎದುರುದಾರರಾದ ಶ್ರೀಮತಿ ರಾಜೇಶ್ವರಿ, ವಿಷಯ ನಿರ್ವಾಹಕರು, ಕೃಷ್ಣರಾಜನಗರ ತಾಲ್ಲೂಕು ರವರು ದಿನಾಂಕ: 30/09/2015 ರಲ್ಲಿ ನಿವೃತ್ತಿ ಹೊಂದಿದ್ದು, ಸದರಿ ಲೋಪವು 2010 ಹಾಗೂ 2015ನೇ ಸಾಲಿಗೆ ಸಂಬಂಧಪಟ್ಟಿರುತ್ತದೆ. ಆದ್ದರಿಂದ ಸದರಿ 4ನೇ ಎದುರುದಾರರುಗಳ ವಿರುದ್ದ ಕೆ.ಸಿ.ಎಸ್.ಆರ್., 214 (2) (ಬಿ) (ii) ರಡಿ ತನಿಖೆ ಕೈಗೊಳ್ಳಬಹುದಾಗಿರುತ್ತದೆ.

21. ಆದಕಾರಣ, 2ನೇ ಎದುರುದಾರರಾದ ಶ್ರೀ ಚಲುವರಾಜು, ಉಪನೋಂದಣಾಧಿಕಾರಿ, ಕೃಷ್ಣರಾಜನಗರ ತಾಲ್ಲೂಕು, ಮೈಸೂರು ಜಿಲ್ಲೆ ಮತ್ತು 4ನೇ ಎದುರುದಾರುದಾರರಾದ ಶ್ರೀಮತಿ ರಾಜೇಶ್ವರಿ, ವಿಷಯ ನಿರ್ವಾಹಕರು, ಕೃಷ್ಣರಾಜನಗರ ತಾಲ್ಲೂಕು, ಮೈಸೂರು ಜಿಲ್ಲೆ ಮತ್ತು 6ನೇ ಎದುರುದಾರರಾದ ಶ್ರೀ ಚಿಕ್ಕನಂಜಯ್ಯ, ಹಿಂದಿನ ಮುಖ್ಯಾಧಿಕಾರಿಗಳು, ಕೃಷ್ಣರಾಜನಗರ ತಾಲ್ಲೂಕು, ಮೈಸೂರು ಜಿಲ್ಲೆ (ಹಾಲಿ ಪ್ರಾಜೆಕ್ಟ್ ಆಫಿಸರ್, ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಛೇರಿ, ಮೈಸೂರು ರವರುಗಳ ವಿರುದ್ದ ಇಲಾಖಾ ವಿಚಾರಣೆ ನಡೆಸುವ ಸಂಬಂಧ ಮುಂದುವರಿಯುವುದು ಅಗತ್ಯ ಎಂದು ಕಂಡುಬಂದಿದ್ದು, '2, 4 ಮತ್ತು 6ನೇ ಎದುರುದಾರರುಗಳು' ಸರ್ಕಾರಿ/ಸಾರ್ವಜನಿಕ ಸೇವಕರಾಗಿದ್ದು ತಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಮತ್ತು ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ವೇದ್ಯವಾಗುತ್ತದೆ.

22. ಆದುದರಿಂದ ಮೇಲಿನ ಕಾರಣ ಹಾಗೂ ಕಡತದಲ್ಲಿನ ಆಧಾರಗಳಿಂದ ಆಪಾದಿತ ಸರ್ಕಾರಿ ನೌಕರರು ಕರ್ನಾಟಕ ನಾಗರೀಕ ಸೇವಾ(ನಡತೆ) ನಿಯಮಗಳು, 1966ರ ನಿಯಮ 3(1) (ii) ರಿಂದ (iii) ರನ್ವಯ ದುರ್ನಡತೆಯೆಸಗಿದ್ದು, ಶಿಸ್ತು ಕ್ರಮಕ್ಕೆ ಭಾದ್ಯರಾಗಿರುವುದು ಕಂಡು ಬಂದಿರುವುದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಈ ಮೂಲಕ ಆಪಾದಿತ ನೌಕರರ ವಿರುಧ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಬಂಧ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 14-ಎ ರಡಿಯಲ್ಲಿ ಆ.ಸ.ನೌಕರರ ವಿರುಧ್ಧ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿ, ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966ರ, ಶಿಸ್ತು ನಡವಳಿಕೆಯನ್ನು ಆಪಾದಿತ ಸರ್ಕಾರಿ ನೌಕರರ ವಿರುಧ್ಧ 14-ಎ ಇಲಾಖಾ ವಿಚಾರಣೆಯನ್ನು ನಡೆಸಲು ಶಿಸ್ತು ಪ್ರಾಧಿಕಾರಿಯಾದ ಸರ್ಕಾರ ಉಲ್ಲೇಖ (1)ರ ಆದೇಶದಲ್ಲಿ ಗೌರವಾನ್ವಿತ ಉಪಲೋಕಾಯುಕ್ತರವರಿಗೆ ವಹಿಸಿದ್ದು, ಗೌರವಾನ್ವಿತ ಉಪಲೋಕಾಯುಕ್ತರವರು ಅಪರ ನಿಬಂಧಕರು (ವಿಚಾರಣೆಗಳು 1) ಇವರನ್ನು ವಿಚಾರಣೆ ನಡೆಸಲು ನೇಮಕ ಮಾಡಿದ್ದಾರೆ. ಆದ್ದರಿಂದ ನಿಮ್ಮ ವಿರುಧ್ಧ ಈ ಆಪಾದನೆ.

23. The DGOs had filed their comments. The DGO No.1 had contended that, when he was working as Sub-Registrar of K.R.Nagar, he had got registered the sale deed as document No. KRN-1-4245/201`4-15 CD No.KRND-89 on 21.1.2015. While registering this document he had,

gone through all the relevant documents, which he had to go through as per the circular No. ಕಂ ಎ 344 ಮುನೋಮು 2008 ದಿನಾಂಕ: 6.4.2009. Neither the provision of Registration Act nor any of the Government Circular direct him to go through Mother Deed while registering a document. He had no power to reject to get register a document when a mother deed was not produced by him. As per the Karnataka Registration Act, 'it shall form no part of the registering officers duty to enquire into the validity of a document brought to him for registration or to attend to any written or verbal protest against the registration of a document, provided execution is duly admitted. It is very clear that, Sub-Registrar has no authority to decide any such validity/genuineness and is only bound to register the deed when the deed in question has satisfied all the requirements of provisions of registration Act, 1908. The registering officer has no power or authority to decide upon the title to a property, which is held in 1991 (2) ILR(Kar) 1804. It is also held that, the Sub-Registrar is entrusted with the duty of registering the documents in accordance with the provisions of the Act, and he is not authorized to go into the genuineness or otherwise of the documents presented before him. If complaints are received, action may have to be initiated against the guilty, the Sub-Registrar can atmost be a witness and also he is not competent under any law to decide regarding the Right, Title and Ownership about any property. No officer of registration department is competent to do so, it is the jurisdiction of the civil court to decide about the ownership and title of the property. By contending like above, the DGO No. 1 had relied upon many decisions regarding his powers under Registration Act. Thus, he had contended that, when the document was produced before him for registration by the said Gangadhar, he got it registered by going through the relevant documents as required as per the Government

Circulars. Thus, he prayed to exonerate him from the present proceedings.

24. The DGO No.2 was working as a case worker during the said period. She had also contended in her comments that, when she was working as case worker in Municipality Office, K.R.Nagar, one Gangadhara S/o. N.M.Achar has filed an application along with some documents to change the khata of a site which was in the name of one Rama S/o Chikkanayaka. After perusing the said application she had put up the same by entering the notes to change the khata before the Chief Officer. He had in turn directed Revenue Inspector Sri. Prabhu to inspect the spot and to give report and after submitting his report, to put up the same before him for changing the khata. Thereafter, she had entered the same in the necessary registers and put up before the Chief Officer, K.R.Nagar. Further, regarding the same property, one Smt. Meena W/o. Ramesh also filed an application to change the khata of the said property in her name. And after receiving the same, the Chief Officer directed the Revenue Inspector to inspect the spot and give his report. He had also directed that, after receiving the R.I.report in respect of the said property, directed to change the khata and as per his order by making necessary entries in the relevant registers, she had put up the same before the Chief Officer. Thus, she had contended that, she had not at all committed any dereliction of duty but acted in accordance with law and as per the direction of the Chief Officer, K.R.Nagar. Hence, prayed to exonerate her from the present proceedings.

25. The DGO No.3 Chikkananjaiah, who was working as Chief Officer of Municipality, K.R.Nagar also contended that, on 22.1.2015 one Smt. Meena W/o. Ramesh had filed an application and a registered sale deed

along with Form No.15 praying to change the right in the property of Municipal Assessment No. 9550/39 in her name from the name of G.A.Gangadhar S/o. M.T.Achar. The concerned Case Worker Smt. Rajeshwari had sent the file to the Revenue Inspector Sri. K.Prabhu on 22.1.2015 for his report. As the said Revenue Inspector submitted his report regarding the said property, the case worker put up the file to change the Right of the property bearing Municipal Assessment No. 9550/39 in the name of Smt. Meena. As the report as well as the documents were in accordance with law, he had changed the Right of the property in the name of Smt. Meena for the purpose of payment of tax. In the municipality, the name will be changed just for the sake of payment of tax, it would not transfer any right in the property. Nobody would get any right over the property through the municipal documents. Regarding this aspect, the circular of the Government dated 31.5.2004 states as, "ಪುರಸಭೆಗಳಿಂದ ನೀಡುವ ನಮೂನೆ-3 ಪ್ರಪತ್ರ ಮಾತ್ರ ಕ್ರಮಬದ್ಧ ದಾಖಲಾತಿಯೆಂದು ಭಾವಿತ ವ್ಯಕ್ತಿಯಾಗಲಿ ಅಥವಾ ಆರ್ಥಿಕ ಸಂಸ್ಥೆಯಾಗಲೀ ಭಾವಿಸತಕ್ಕದಲ್ಲ" Further, Karnataka Government Circular dated 26.2.2003 also says as, "ಕಂದಾಯ ಸ್ವೀಕೃತಿಯು ಈ ಆಸ್ತಿಯ ಮೇಲೆ ತೆರಿಗೆ ಪಾವತಿದಾರರಿಗೆ ಯಾವುದೇ ರೀತಿಯ ಮಾಲೀಕತ್ವದ ಹಕ್ಕನ್ನು ದೃಢೀಕರಿಸುವುದಿಲ್ಲ". Thus, he had done his duty as per law and as per Government Circulars. He had not committed any dereliction of duty. So, he had prayed to exonerate him from the present proceedings.

26. The Disciplinary Authority has examined the complainant as PW-1 and Ex.P1 to P11 got marked. The Second Oral Statement of DGOs under Rule 11(16) was recorded. The DGO No.1 to 3 got examined as DW-1 to 3 and Ex.D1 to D6 got marked on behalf of the DGOs.

27. The points that arise for my consideration are:

**Point No.1 : Whether the charges framed against the DGOs are proved by the Disciplinary Authority?**

**Point No.2 : What order?**

28. Heard, perused the entire case record and the written brief filed by the DGO No.1 to 3.

29. My answers to the above points are as here under:

Point No. 1 : **Disiplinary Authority had failed to prove the charges levelled against DGO No.1 but proved the charges against DGO No. 2 and 3.**

Point no. 2 : **As per final order for the following ;**

**REASONS**

30. Point No.1 : Here, as already observed above, the complainant by name Smt. Mahadevi W/o late Rama, Kantenahalli, Ashraya Layout, K.R.Nagar Town, Mysuru District filed a complaint against the DGOs alleging misconduct and dereliction of duty.

31. The complaint of the complainant is that, the K.R.Nagar Municipality had allotted a site measuring 20 X 30' under Ashraya Scheme in her husband Ramu's name 20 years back. Four years back when she had visited the spot, after the death of her husband, somebody putting up the foundation in the said site. When, she said that, it is her site which is in her husband's name, one Meena said that, she had purchased the said site from her husband. Then she had gone to Municipal Office of K.R.Nagar and gone through the documents and

came to known that, one Gangadhara had sold out the said site to Smt. Meena. But, herself or her children or her husband never executed any sale deed either in the name of Gangadhar or in the name of Meena. But, still the Sub-Registrar of K.R.Nagar got registered the said sale deed in the name of Smt. Meena. The DGOs by colluding with each other got changed the name in the Municipal documents in the name of Smt. Meena. Thus, the DGOs had committed dereliction of duty.

32. The Complainant Smt. Mahadevi got examined as PW-1. She had deposed in her Chief Examination like above only. The written complaint given by her to this institution is marked at Ex.P1. Form No. I and II are got marked as Ex.P2 and P3 respectively. The Xerox copy of the Hakkupatra which is in her husband's name is got marked as Ex.P4. The Xerox copy of the Sale deed executed by Gangadhar in the name of Smt. Meena is marked as Ex.P5. The property Register extract in the name of Smt. Meena is marked as Ex.P6. The death certificate of the complainant's husband is marked as Ex.P7. The Khata extract of the site in the name of Rama is marked as Ex.P8. The Xerox copy of Ration Card is marked as Ex.P9. The Xerox copy of khata registered which is in her husband's name is marked as Ex.P10. The Endorsement given by the Chief Officer of K.R.Nagar Municipality is marked as Ex.P11. The comments sent by DGO No.1 to 3 are got marked as Ex.P12, P13 and P14 respectively. These are all the documents on which the complainant had relied upon.

33. Here, all three DGOs had appeared and filed their comments and also written statement. As already observed above, the Ist DGO, the Sub-Registrar had contended that, whenever a document is produced before him, by going through the relevant documents and after collecting

the necessary fee, he has to register the said document. He is not required to ask for Mother Deed. Moreover, he is not required to enquire into the validity of a document brought to him for registration. So, he had got registered the sale deed executed by the Gangadhar in favour of Smt. Meena. There was no dereliction of duty from his side. He had relied upon many decisions in this regard.

34. DGO No.2 and 3 contended that, the DGO No.2 being the case worker had put up the file before DGO No.3 after submitting the report regarding the said property by the concerned Revenue Inspector. The DGO No.3, after perusing the report of Revenue Inspector and by going through the documents produced by Smt. Meena had changed property in the name of Smt. Meena, just for the sake of payment of tax only. Any changes/entries made in the documents of Municipal Office would not transfer any Right to anybody. Thus, they prayed to exonerate them from the present proceedings.

35. By going through the documents produced by the complainant it reveal that, a site measuring 20X30 feet allotted by the Municipal Office, K.R.Nagar on 18.7.1993 to one Rama of K.R.Nagar. The Death Certificate of Rama reveal that, the complainant Mahadevi is his wife. The Property Register extract also reveal that, the said property earlier was in the name of Rama S/o. Chikkanayaka. Later, it changed in to the name of V.A.Gangadhar. Form No.15 reveal the name of V.A.Gangadhara. The latest property Register Exract reveal the name of Smt. Meena. Thus, it is clear that, the said site was allotted to the husband of this complainant under Ashraya Yojane on 18.7.1993. But, later, one V.A.Gangadhara and his wife, son sold out the said site to one Smt. Meena W/o. Ramesh for Rs.1,35,000/-. There is no document to

show how the said V.A.Gangadhara got Right over the said property. Here, the DGO No. 1 to 3 also got examined as DW-1 to DW-3 and deposed in their chief examination whatever the contention taken by them in their comments as well as in their written statement. Further, they have also produced the property register extract, which is marked as Ex.D1 which is in the name of V.A.Gangadhara, S/o. M.T.Achar. The sketch of the property is marked as Ex.D2. The certificate issued by the Chief Officer, Municipal Office, K.R.Nagar to V.A.Gangadhar is marked as Ex.D3. The Tax receipt which is in the name of V.A.Gangadhar is marked as Ex.D4. The affidavit executed by Smt. Meena and V.A.Gangahdar is got marked as Ex.D5. The circular of the Karnataka Government dated 31.5.2004 is got marked as Ex.D6. These are all the documents on which the DGO No.1 had relied upon.

36. The DGO No. 2 and 3, on the basis of an affidavit only got changed the name of V.A.Gangadhara in the place of Ramu for the sake of payment of taxes. Here, it is very important to note that, the DGO No.2 had put up the file before the earlier Chif Officer for change of khata. Regarding this aspect thc DGO No.2 i.e., Smt. Rajeshwari who was working as Case Worker got examined as DW-2, who had been thoroughly cross examined by the Presenting Officer. In the Cross Examination she had admitted as, "ಈ ಪ್ರಕರಣದ ಸ್ವತ್ತು ಮೊದಲು ಶ್ರೀ ರಾಮು ಬಿನ್ ಚಿಕ್ಕನಾಯ್ಕ ಎನ್ನುವವರ ಹೆಸರಿನಲ್ಲಿತ್ತು ಎನ್ನುವುದು ಸರಿ. ನಂತರ ಸದರಿಯವರ ಹೆಸರಿನಿಂದ ನೋಟರಿ ಪ್ರಮಾಣ ಪತ್ರದ ಆಧಾರದ ಮೇಲೆ ಶ್ರೀ ವಿ.ಎ.ಗಂಗಾಧರ ಎನ್ನುವವರ ಹೆಸರಿಗೆ ಖಾತೆ ಬದಲಾವಣೆಗೊಂಡಿರುತ್ತದೆ ಎನ್ನುವುದು ಸರಿ. ನೋಟರಿ ಪ್ರಮಾಣ ಪತ್ರದ ಆಧಾರದ ಮೇಲೆ ಖಾತೆ ಬದಲಾವಣೆಗಾಗಿ ನಾನು ಟಿಪ್ಪಣಿಯನ್ನು ಶ್ರೀ ಕೆ.ಸಿ.ನಾಗರಾಜ, ಮುಖ್ಯಾಧಿಕಾರಿಗಳು, ಪುರಸಭೆ, ಕೆ.ಆರ್.ನಗರ ರವರ ಸಹಿಗಾಗಿ ಮಂಡಿಸಿದ್ದೆ ಎನ್ನುವುದು ಸರಿ. ನೋಟರಿ ಪ್ರಮಾಣ ಪತ್ರದ ಆಧಾರದ ಮೇಲೆ ಖಾತೆ ಬದಲಾವಣೆ ಮಾಡಬಹುದು ಎಂದು ಟಿಪ್ಪಣಿಯನ್ನು ಪುರಸಭೆ ಮುಖ್ಯಾಧಿಕಾರಿಯವರ ಮುಂದೆ ಸಹಿಗಾಗಿ ಮಮಡಿಸಿ ಕರ್ತವ್ಯ ಲೋಪ ಎಸಗಿರುತ್ತೇನೆ ಎನ್ನುವುದು ಸರಿಯಲ್ಲ.

ನಂತರದಲ್ಲಿ ಶ್ರೀಮತಿ ಮೀನಾ ಕೋಂ ಗಣೇಶರವರು ನೋಂದಣಿ ಕ್ರಯಪತ್ರದ ಆಧಾರದ ಮೇಲೆ ಸದರಿ ಸ್ವತ್ತಿನ ಖಾತೆಯನ್ನು ಅವರ ಹೆಸರಿಗೆ ಬದಲಾಯಿಸಿಕೊಡಬೇಕು ಎಂದು ಕೋರಿದ್ದರು ಎನ್ನುವುದು ಸರಿ. ಆಗ ನಾನು ವಿಷಯ ನಿರ್ವಾಹಕಳಾಗಿ ಕೂಲಂಕುಷವಾಗಿ ಕಡತವನ್ನು ಪರಿಶೀಲಿಸದೇ, ಶ್ರೀಮತಿ ಮೀನಾ ಕೋಂ. ರಮೇಶರವರ ಹೆಸರಿಗೆ ಖಾತೆ ಬದಲಾಯಿಸಬಹುದು ಎಂದು ಶಿಫಾರಸ್ಸು ವರದಿಯನ್ನು ಮುಖ್ಯಾಧಿಕಾರಿಯವರಿಉಗೆ ಮಂಡಿಸಿದ್ದೆ ಎನ್ನುವುದು ಸರಿ. ಸಾಕ್ಷಿ ಮುಂದುವರೆದು ನುಡಿಯುತ್ತಾರೆ. ಆ.ಸನೌ-3 ರವರು ಖಾತೆ ಬದಲಾವಣೆ ಮಾಡಬಹುದು ಎಂದು ಅನುಮೋದಿಸಿದ್ದರು ಎನ್ನುತ್ತಾರೆ. ಈ ರೀತಿ ದಾಖಲಾತಿಗಳನ್ನು ಪರಿಶೀಲಿಸದೆ ವಿಷಯವನ್ನು ಮಂಡಿಸಿ ಕರ್ತವ್ಯ ಲೋಪ ಎಸಗಿರುತ್ತೇನೆ ಎನ್ನುವುದು ಸರಿಯಲ್ಲ". Thus, the DGO No.2 had clearly admitted that, only on the basis of an affidavit the Khata had been changed and she had only put up the file for changing of khata on the basis of an Affidavit without perusing other documents. Here, the DGO No.3 had changed the khata of the said property on the basis of the note put up by DGo No.2. The DGO No.3 had deposed in his cross examination as, "ಈ ಪ್ರಕರಣದ ಸ್ವತ್ತಿಗೆ ಸಂಬಂಧಪಟ್ಟಂತೆ ಆಸನೌ-2 ರವರು ಮಂಡಿಸಿರುವ ಟಿಪ್ಪಣಿಯನ್ನು ಕಚೇರಿಯಲ್ಲಿನ ದಾಖಲಾತಿಗಳೊಂದಿಗೆ ತಾಳೆ ಮಾಡದೆ ಶ್ರೀಮತಿ ಮೀನಾರವರ ಹೆಸರಿಗೆ ಖಾತೆ ಬದಲಾಯಿಸಿಕೊಟ್ಟಿರುತ್ತೇನೆ ಎನ್ನುವುದು ಸರಿಯಲ್ಲ. ದಾಖಲಾತಿಗಳನ್ನು ಪರಿಶೀಲಿಸದೇ ಖಾತೆ ವರ್ಗಾವಣೆ ಮಾಡಿ ಕರ್ತವ್ಯ ಲೋಪ ಎಸಗಿರುತ್ತೇನೆ ಎನ್ನುವುದು ಸರಿಯಲ್ಲ". Thus, the DGO No.3 being the Chief Officer of the said Municipality, before changing the Khata in the name of Meena he had to go through the relevant documents. But, here it is very important to note that, only on the basis of an Affidavit, they had changed the khata in the name of V.A.Gangadhar. Thus, here because of the negligence act of DGO No. 2 and 3 the said things took place. Of course the complainant had deposed in her cross examination saying that, Meena had filed a suit before the jurisdictional court against her and they got compromised the matter in between them and in view of the said compromise the suit was decreed. Now, the said site is in the possession of Meena only. Now, after the compromise, they are in cordial relationship. Further, she had also deposed as, "ಉಪನೊಂದಣಾಧಿಕಾರಿಗಳು ಯಾವುದೇ ರೀತಿಯ ಕರ್ತವ್ಯ ಲೋಪ ಎಸಗಿರುವುದಿಲ್ಲ ಎಂದು ಮಾಡಿದ ಸಲಹೆಗೆ ಸಾಕ್ಷಿ ಸದರಿ ನಿವೇಶನಕ್ಕೆ

ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ಹಾಜರುಪಡಿಸಿದ್ದರಿಂದ ಅವರು ನೋಂದಣಿ ಮಾಡಿರುತ್ತಾರೆ ಎನ್ನುತ್ತಾರೆ". Here, the defence of DGO No.1 is also that, as per Rule 73 of Karnataka Registration Act, 1965, it is not the duty of Registering Officer to enquire into the validity of a document brought to him for Registration. So, he had deposed in his Cross Examination as, **"ನೋಂದಣಿ ಮಾಡುವ ಮುನ್ನ ಮದರ್ ಡೀಡ್,** ಖಾತಾ ಪತ್ರ ಸ್ಕೆಚ್ ಹಾಗೂ ಇತರೆ ದಾಖಲಾತಿಗಳನ್ನು ಪರಿಶೀಲಿಸಿ ನಂತರ ಕ್ರಯಪತ್ರವನ್ನು ನೋಂದಣಿ ಮಾಡಬೇಕಾಗಿದ್ದುದು ನಿಮ್ಮ ಕರ್ತವ್ಯವಾಗಿತ್ತು ಎಂದು ಮಾಡಿದ ಸಲಹೆಗೆ ಸಾಕ್ಷಿ, ಮೂಲ ದಾಖಲೆಯನ್ನು (ಟೈಟಲ್ ಡಿಡ್) ಸಹಾ ನಾನು ನೋಂದಣಿ ಮಾಡುವ ಮುನ್ನ ನೋಡಬೇಕಿತ್ತು ಎನ್ನುವುದು ಸರಿಯಲ್ಲ. ಉಳಿದ ಎಲ್ಲಾ ದಾಖಲಾತಿಗಳನ್ನು ನಾನು ಪರಿಶೀಲಿಸಿದ್ದೆ ಎನ್ನುತ್ತಾರೆ. ಮದರ್ ಡೀಡ್‌ನ್ನು ನೋಡದೇ ನೀವು ಕ್ರಯಪತ್ರವನ್ನು ನೊಂದಣಿ ಮಾಡಿರುತ್ತೀರಿ ಎಂದು ಪುನ: ಮಾಡಿದ ಸಲಹೆಗೆ ಸಾಕ್ಷಿ, ಅದರ ಅಗತ್ಯತೆ ಇರಲಿಲ್ಲ ಎನ್ನುತ್ತಾರೆ. ಆ ನಿಟ್ಟಿನಲ್ಲಿ ನಾನು ಇರ್ತವ್ಯ ಲೋಪ ಎಸಗಿರುತ್ತೇನೆ ಎನ್ನುವುದು ಸರಿಯಲ್ಲ". In this regard he had relied upon many decisions. In 1991(2) ILR(Kar) 1804 it is held, **"Registering Officer has no power or authority to decide upon the title to a property. Nor he is required or expected to verify or satisfy himself about the title of the executants of the document to the property which is the subject matter of the document. If a duly stamped document is presented for registration with required registration fee with supporting enclosures, the Sub-Registrar will proceed to register the document, if there is a compliance with the statutory requirements under various laws deciding questions of the title is in the realm of civil courts and not the Registering Officers under the Act".** He had also relied upon another decision i.e., 2001 (1) KLJ 215A, in which, it is held as, **"When the document was presented for Registration fulfilling all the requirements the Sub-Registrar has no option but to Register the document unless the document is not in conformity with the provisions of the Indian Registration Act of 1908 & the relevant rules. The Sub-Registrar was entrusted with the duty of registering the documents in accordance with the**

**provisions of the Act & he was not authorized to go in to the genuineness or otherwise of the documents presented before him".** He had drelied upon another decision reported in 1990(3) KLJ 408A: ILR 1991 Kar 1804, in which it is held, **"it is quite patent that the Sub-Registrar is required to make an enquiry whether the document has really been executed by a person who purposes to execute the document, and further as to the identity of the executants or his representative who appears before him. It is well settled that the question as to the validity of the document is alien to such an enquiry. If the executants admits having executed a document, the Sub-Registrar must order for Registration of the document if presented in accordance with the provisions of the Act".** Thus, as per the above decisions, and as per the provisions of Karnataka Registration Act, the Sub-Registrar's act of registering a document restricted to the provisions of the said act only. Here, in the present case also the DGO No. 1 had registered the sale deed by going through the relevant documents he had to go through under the said Act and after enqduiring the parties to the sale deed.

37. Thus, in this case, it can be said without any hesitation that, the DGO No. 2 and 3 only had committed dereliction of duty and misconduct while discharging their duties because of their gross negligence. Hence, I answere point No. 1: **The Disiplinary Authority had failed to prove the charges levelled against DGO No.1 but proved the charges against DGO No. 2 and 3".**

**38. Point No. 2**: For the reasons stated above, I proceed to pass the following;

## ORDER

**The Disiplinary Authority had failed to prove the charges levelled against DGO No.1 i.e, Sri. Chaluvaraju, Sub-Registrar, K.R.Nagar Taluk, Mysuru District but proved the charges against DGO No. 2 Smt. Rajeshwari, Case Worker, K.R.Nagar Taluk, Mysuru Disrict and DGO No. 3 Sri. Chikkananjaiah, the then Chief Officer, K.R.Nagar Taluk, Mysuru District.**

***This report be submitted to the Hon'ble Upalokayukta-I in a sealed cover forthwith.***

Dated this the 25rd September, 2019

25/9/19

**(K.BHAGYA)**
Additional Registrar Enquiries-14
Karnataka Lokayukta
Bangalore.

## ANNEXURES

| Sl. No. | Particulars of Documents |
|---|---|
| 1 | **Witness examined on behalf of the Disciplinary Authority** |
| | PW-1: Smt. Mahadevi (Original) |
| 2 | **Documents marked on behalf of the Disciplinary Authority Ex.P-1 to Ex.P-14** |
| | Ex. P-1: Complaint (Original) |
| | Ex. P-2: Form No.I(original). |
| | Ex. P-3: Form No. II (Original) |
| | Ex. P-4: Title deed in the name of Sri. Rama (xerox) |
| | Ex. P-5: Sale deed(xerox) |
| | Ex. P-6: Extract of Property Tax Register (xerox) |
| | Ex. P-7: Death Certificate (xerox). |
| | Ex. P-8: Extract of tax Book No.21 Page 61 (xerox). |
| | Ex.P-9: Ration Card (xcrox) |
| | Ex.P-10: Proforma 15 (xerox) |
| | Ex.P-11: Acknowledgement dated 30.1.2016 (xerox) |
| | Ex.P-12: Letter dated 25.11.2015 addressed to DRE-4(xerox) |
| | Ex.P-13: Lr. Addressed to DRE-4 by Rajeshwari (xerox) |
| | Ex.P-14: Lr. Addressed to DRE-4 by Chikkananjaiah(xerox) |
| 3 | **Witness examined on behalf of the DGO.,** |
| | DW-1: Sri. Cheluvaraju, DGO No.1(Original)<br>DW-2: Smt. Rajeshwari, DGO No.2 (Original)<br>DW-3: Sri. Chikkananjaiah, DGO No.3( Original) |
| | **Documents marked on behalf of the DGO** |
| | Ex.D1: Extract of Property Tax Register |
| | Ex.D2: Scketch |
| | Ex.D3: Certificate dated 23.10.2014 |
| | Ex.D4: Challan datd 21.10.2014 |
| | Ex.D5: Certificate site given to Smt. Meena |
| | Ex.D6: Circular dated 31.5.2004 |

Dated this the 25th September, 2019

(signature) 25/9/19

**(K.BHAGYA)**
Additional Registrar Enquiries-14
Karnataka Lokayukta
Bangalore.